ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 82-89
©*IIMRD*, Mysuru
IIMRD JOURNALS
www.iimrd.com

# ಚಾಮರಾಜನಗರ ಜಿಲ್ಲೆಯ ಕುಲ ಕಸುಬುಗಳು: ಜಾನಪದೀಯ ಅಧ್ಯಯನ

**ಶಿವರಾಜು ಎ**[1]

**ಪೀಠಿಕೆ**

ಕರ್ನಾಟಕ ಶಿಲ್ಪಕಲೆಗಳ ತವರು ಮತ್ತು ಬಹುಸಂಸ್ಕೃತಿಗಳ ಬೀಡಾಗಿದೆ. ಇದು ಯೋಗಿಗಳ ಮಂದಿರವಾಗಿ, ಜ್ಞಾನಿಗಳ ಆಗರವಾಗಿದೆ. ಇಂತಹ ಸುಕ್ಷೇತ್ರವಾದ ಕರ್ನಾಟಕ ಜನಪದ ಸಂಸ್ಕೃತಿಯ ಶ್ರೀಮಂತ ನೆಲೆಯಾಗಿದೆ. ಇಲ್ಲಿನ ಸಂಸ್ಕೃತಿಯ ಉಳಿವಿಗೆ ಕಾರಣವನ್ನು ಸಂಶೋಧನೆಯ ಮೂಲಕ ಹೊರ ಹೆಕ್ಕಿ ತೆಗೆದಾಗ ಇಲ್ಲಿನ ಜನಪದರ ನರನಾಡಿಗಳಲ್ಲಿ, ರಕ್ತದ ಕಣಕಣಗಳಲ್ಲಿ ಸಂಸ್ಕೃತಿಯ ಪರಂಪರೆಯ ಸತ್ವ ಬೇರು ಬಿಟ್ಟಿರುವುದನ್ನು ಕಾಣುತ್ತೇವೆ. ಪ್ರತಿಯೊಬ್ಬರು ತಮ್ಮ ಪರಂಪರೆಯಿಂದ ತಾತ, ಮುತ್ತಾತ ಮೊದಲಾದವರಿಂದ ತಲತಲಾಂತರದ ನಡುವೆ ಕುಲಕಸುಬುಗಳನ್ನು ಮಾಡುವ ಪ್ರತಿಭೆ ನೈಪುಣ್ಯತೆಯನ್ನು ಜೊತೆ ಜೊತೆಯಾಗಿಯೇ ಪಡೆದು ಜನಪದ ಸಂಸ್ಕೃತಿಯ ಸಂಪತ್ತನ್ನು ಶ್ರೀಮಂತಗೊಳಿಸಿದ್ದಾರೆ.

ಕುಲಕಸುಬುಗಳು ಮಾನವನು ತನ್ನ ಜೀವನೋಪಾಯಕ್ಕಾಗಿ ಕಂಡುಕೊಂಡು ಮುಂದುವರಿಸಿಕೊಂಡು ಬಂದ ವೃತ್ತಿ. ಮಾನವ ಅಲೆಮಾರಿಯಾಗಿದ್ದಾಗ ಪ್ರಾಣಿಗಳಂತೆಯೇ ಜೀವನ ನಡೆಸುತ್ತಿದ್ದ. ಗುಹೆ, ಮರದ ಪೊಟರೆಗಳಲ್ಲಿ ಆತ ವಾಸ ಮಾಡುತ್ತಿದ್ದು, ಗೆಡ್ಡೆ, ಗೊಸುಗಳು, ಹಣ್ಣು, ಹಂಪಲು ಆತನ ಆಹಾರವಾಗಿತ್ತು. ತದನಂತರ ಜೀವನ ವಿಕಾಸಗೊಳ್ಳುತ್ತಿದ್ದಂತೆ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ. ಆತ ಒಂದು ಸ್ಥಳದಲ್ಲಿ ನೆಲೆನಿಂತು ವಾಸಮಾಡತೊಡಗಿದ, ತನ್ನ ಜೀವನೋಪಾಯಕ್ಕಾಗಿ ಕಸುಬುಗಳನ್ನು ಹುಡುಕತೊಡಗಿದ. ಆ ಕಸುಬುಗಳು ತಂದೆಯಿಂದ ಮಗನಿಗೆ, ಮೊಮ್ಮಕ್ಕಳಿಗೆ ವರ್ಗಾಯಿಸಲ್ಪಟ್ಟು ಕುಲಕಸುಬಾಗಿ ಕಾಲಾನಂತರ ಒಂದು ಸಮುದಾಯದ ವೃತ್ತಿಯಾಗಿ ಜಾತಿಯಾಗಿ ಗುರ್ತಿಸಲ್ಪಟ್ಟಿದೆ.

ಕಸುಬುಗಳನ್ನು ಪ್ರಧಾನವಾಗಿ ಪಾರಂಪರಿಕ ಮತ್ತು ಆಧುನಿಕ ಕಸುಬುಗಳೆಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಪಾರಂಪರಿಕ ಕಸುಬುಗಳನ್ನು ಮಾನವನು ಪ್ರಾಚೀನ ಕಾಲದಿಂದಲೂ ಅನುಸರಿಸಿಕೊಂಡು ಬಂದಿದ್ದೂ, ಆಯಾ ಕಸುಬುಗಳನ್ನು ಅವಲಂಬಿಸಿಕೊಂಡು ಬಂದ ಸಮುದಾಯಗಳಿಂದ ಮಾನ್ಯತೆ ಪಡೆದಿರುತ್ತದೆ. ಸಮುದಾಯಗಳ ವೃತ್ತಿಪರತೆ, ಕೌಶಲ್ಯ ಮತ್ತು ಜಾಣ್ಮೆಗಳನ್ನು ಮೈಗೂಡಿಸಿಕೊಂಡು ಆಯಾ ಕಸುಬುಗಳು ಬೆಳೆದು ಬಂದಿರುವುದನ್ನು ಕಾಣಬಹುದು. ಅಂತಹ ಪರಂಪರೆಯಿಂದ ಬಂದ ಕುಲದ ವೃತ್ತಿಗಳನ್ನು ಕುಲಕಸುಬುಗಳು ಎಂದು ಗುರ್ತಿಸಲಾಗಿದೆ.

[1] *ಸಂಶೋಧಕರು, ಜಾನಪದ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿವಿ, ಮೈಸೂರು.*

ಆಧುನಿಕತೆ ಮತ್ತು ಯಾಂತ್ರಿಕ ಬದುಕಿನ ನಡುವೆ ಇಂದು ಕುಲಕಸುಬುಗಳು ಕಣ್ಮರೆಯಾಗುತ್ತಿದ್ದರೂ ಚಾಮರಾಜನಗರ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಇಂದಿಗೂ ಕೂಡ ಅನೇಕ ಸಮುದಾಯಗಳು ತಮ್ಮ ಮೂಲಕಸುಬುಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದು, ಇಂತಹ ಮೂಲಕಸುಬುಗಳನ್ನು ಪ್ರಸ್ತುತ ಲೇಖನದಲ್ಲಿ ಜಾನಪದೀಯ ದೃಷ್ಟೀಕೋನದಿಂದ ವಿವರಿಸಲಾಗಿದೆ.

ಚಾಮರಾಜನಗರವು ಕರ್ನಾಟಕ ರಾಜ್ಯದ ದಕ್ಷಿಣ ತುದಿಯಲ್ಲಿರುವ ಗಡಿ ಜಿಲ್ಲೆ. ಇದು ಜಾನಪದ ಸಂಸ್ಕೃತಿಯ ಜೇನುಗೂಡು. ಇತಿಹಾಸ ಪ್ರಸಿದ್ಧ ಮೈಸೂರು ರಾಜವಂಶಸ್ಥರಿಗೆ ಜನ್ಮ ನೀಡಿದ ತಾಣವಾಗಿದೆ. ಅಲ್ಲದೆ ಇತಿಹಾಸದುದ್ದಕ್ಕೂ ತನ್ನ ಸಂಬಂಧದ ಕೊಂಡಿಯನ್ನು ಪೋಣಿಸುತ್ತಲೇ ಬಂದ ಪ್ರಮುಖವಾದ ಜಿಲ್ಲೆ. ಜನಪದ ಮಹಾಪುರುಷ ಮಹಾದೇಶ್ವರ ನೆಲೆಸಿದ ಪವಿತ್ರ ಸ್ಥಳ. ಮಂಟೆಸ್ವಾಮಿ, ಬಿಳಿಗಿರಿರಂಗಸ್ವಾಮಿ, ವೇಣುಗೋಪಾಲಸ್ವಾಮಿ ಮೊದಲಾದ ದೈವೀ ಪುರುಷರು ನೆಲೆಗೊಂಡಿರುವ ಪುಣ್ಯಭೂಮಿ. ಇಂತಹ ಪ್ರದೇಶದಲ್ಲಿ ಇಲ್ಲಿನ ಜನ ಪರಂಪರೆಯಿಂದ ಬಂದ ಮೂಲಸಂಸ್ಕೃತಿಯನ್ನು ಮೂಲಕಸುಬುಗಳನ್ನು ಮುನ್ನೆಡೆಸಿಕೊಂಡು ಅವುಗಳನ್ನೇ ಜೀವನಕ್ಕೆ ಆಶ್ರಯಿಸಿಕೊಂಡು ಬಹುಸಮುದಾಯದ ಜನರು ಬದುಕುತ್ತಿದ್ದಾರೆ.

ಈ ಜಿಲ್ಲೆಯ ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದು, 5,648 ಚ.ಕಿ.ಮೀ. ವಿಸ್ತೀರ್ಣದಲ್ಲಿ ಚಾಮರಾಜನಗರವನ್ನೊಳಗೊಂಡಂತೆ ಕೊಳ್ಳೆಗಾಲ, ಹನೂರು, ಯಳಂದೂರು, ಮತ್ತು ಗುಂಡ್ಲುಪೇಟೆ ತಾಲೂಕುಗಳನ್ನು ಹಾಗೂ 509 ಗಾಮಗಳನ್ನು ಒಳಗೊಂಡಿದೆ. ಮೊದಲು ಚಾಮರಾಜನಗರಕ್ಕೆ *ಅರಿಕೋಟಾರ* ಎಂಬ ಹೆಸರಿತ್ತು 1880 ರಿಂದೀಚೆಗೆ ಚಾಮರಾಜನಗರ ಎಂಬ ಹೆಸರು ಬಂದಿದೆ. 1825 ರಲ್ಲಿ ಶ್ರೀ ಕೃಷ್ಣರಾಜ ಒಡೆಯರು ಚಾಮರಾಜೇಶ್ವರ ದೇವಾಲಯವನ್ನು ದ್ರಾವೀಡ ಶೈಲಿಯಲ್ಲಿ ನಿರ್ಮಿಸಿದ್ದು ಇದು ಜಿಲ್ಲೆಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ.

2011ನೇ ಜನಗಣತಿ ಪ್ರಕಾರ 5,12,231 ಪುರುಷ ಮತ್ತು 5,08,560 ಮಹಿಳೆಯರನ್ನೊಳಗೊಂಡಂತೆ 10,20,791 ಜನಸಂಖ್ಯೆಯನ್ನು ಹೊಂದಿದ್ದು, ಈ ಜನಸಂಖ್ಯೆಯಲ್ಲಿ 2,59,445 (ಶೇ. 25.42) ಪರಿಶಿಷ್ಟ ಜಾತಿ ಮತ್ತು 1,20,219 (ಶೇ.11.8) ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಹೊಂದಿದೆ. ಅಂದರೆ ರಾಜ್ಯದ ಸರಾಸರಿಗೆ ಹೋಲಿಸಿದರೆ ಈ ಸಮುದಾಯಗಳ ಜನಸಂಖ್ಯೆ ಜಿಲ್ಲೆಯಲ್ಲಿ ಅಧಿಕವಾಗಿರುವುದನ್ನು ಗುರುತಿಸಬಹುದಾಗಿದೆ. ಜಿಲ್ಲೆಯಲ್ಲಿ ಒಟ್ಟು ಶೇ.47.19 ರಷ್ಟು ಕೆಲಸಗಾರರಿದ್ದು, ಇವರು ತಮ್ಮ ಜೀವನೋಪಾಯಕ್ಕಾಗಿ ವ್ಯವಸಾಯ, ಕೃಷಿ ಕೂಲಿ, ಗೃಹ ಕೈಗಾರಿಕೆ, ಮತ್ತೀತರ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಒಟ್ಟು ವ್ಯವಸಾಯ ಮಾಡುವವರ ಪ್ರಮಾಣ ಶೇ 23.61 ರಷ್ಟಿದ್ದು, ಶೇ.25.69 ರಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿ ಕೂಲಿಯನ್ನು ಅವಲಂಬಿಸಿದ್ದಾರೆ. ಇನ್ನೂ ಜಿಲ್ಲೆಯಲ್ಲಿ ಗೃಹ ಕೈಗಾರಿಕೆಯನ್ನು ಅವಲಂಬಿಸಿರುವವರ ಪ್ರಮಾಣ ಶೇ.3.28 ರಷ್ಟಿದ್ದು ಇತರ ಉದ್ಯೋಗಗಳಿಗೆ ಹೋಲಿಸಿದಾಗ ಗೃಹ ಕೈಗಾರಿಕೆಯನ್ನು ಅವಲಂಬಿಸಿರುವವರ ಪ್ರಮಾಣ ಅಧಿಕ

ಪ್ರಮಾಣದಲ್ಲಿದೆ.[2] ಇವೆಲ್ಲದರ ನಡುವೆಯೂ ಕೂಡ ಚಾಮರಾಜನಗರ ಜಿಲ್ಲೆಯ ಜನಪದರು ನೂರಾರು ಕುಲಕಸುಬುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ತಮ್ಮ ವೃತ್ತಿಯನ್ನು ಇಂದಿನ ಆಧುನಿಕ, ಯಾಂತ್ರಿಕ ಬದುಕಿನ ನಡುವೆಯೂ ತಮ್ಮ ಪರಂಪರೆಯಿಂದ ಬಂದ ವೃತ್ತಿಯನ್ನು ಕೈಬಿಡದೆ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಿಕೊಂಡು ಬರುತ್ತಿದ್ದಾರೆ. ಅವುಗಳಲ್ಲಿ ಪಾರಂಪರಿಕವಾಗಿ ಬಂದಂತಹ ಕಮ್ಮಾರಿಕೆ, ಚೆಮ್ಮಾರಿಕೆ, ಬಡಗಿ, ಕುಂಬಾರಿಕೆ, ಅಕ್ಕಸಾಲಿಗರು, ನೇಕಾರಿಕೆ, ಅಗಸರು ಮತ್ತು ಮೀನುಗಾರಿಕೆ, ಕೃಷಿ, ಪಶುಸಾಕಾಣಿಕೆ ಇನ್ನೂ ಮುಂತಾದವುಗಳಾಗಿವೆ.

**ಬಡಗಿ**

ಕುಲಕಸುಬುಗಳಲ್ಲಿ ಬಡಗಿ ಕಸಬು ಒಂದು. ಇವರನ್ನು ಆಚಾರಿಗಳು, ಓಜಿಗಳು ಎಂಬ ಹೆಸರುಗಳಿಂದ ಕರೆಯುತ್ತಾರೆ. ಪ್ರಸ್ತುತ ಆಧುನಿಕತೆಯಲ್ಲಿ ಕಾರ್ಪೆಂಟರ್ ಎಂದು ಗುರ್ತಿಸಿಕೊಂಡಿರುವ ಬಡಗಿಗಳು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ತಮ್ಮ ಕಸುಬುಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಆಧುನಿಕತೆ ಮತ್ತು ಯಾಂತ್ರಿಕತೆ ಇವರ ಮೇಲೆ ಅಷ್ಟೇನು ಪರಿಣಾಮ ಬೀರಿಲ್ಲ, ಮನೆ ಕಟ್ಟಲು ಉಪಯೋಗಿಸುವ ಬಾಗಿಲು, ಕಿಟಕಿ, ತೊಲೆ, ಕಂಬ, ಹೊಸ್ತಿಲು, ಕೃಷಿ, ಉಪಕರಣಗಳಾದ ನೊಗ, ಕುಂಟೆ, ಎತ್ತಿನಗಾಡಿ, ಹಾಗೂ ಪೀಠೋಪಕರಣಗಳಾದ ಕುರ್ಚಿ, ಮೇಜು, ಟಿಪಾಯಿ, ದಿವಾನ್‌ಕಾಟ್, ಸೋಫಾ, ಮಂಚ, ಮೊದಲಾದ ವಸ್ತುಗಳನ್ನು ಬಡಗಿಗಳು ತಯಾರಿಸುತ್ತಾರೆ.

ಪ್ರಾಚೀನ ಕಾಲದಿಂದ ಒಂದು ಸಮುದಾಯದ ನಡುವೆ ಗುರ್ತಿಸಿಕೊಂಡು ಬಂದ ಈ ಕಸುಬು ಇಂದು ಬೇರೆ ಬೇರೆ ಸಮುದಾಯದವರು ಈ ವೃತ್ತಿಯನ್ನು ಆವಲಂಬಿಸಿದ್ದಾರೆ. ಅಂತೆಯೇ ಇವರು ತಮ್ಮ ವೃತ್ತಿಯಲ್ಲಿ ಬಳಸುತ್ತಿದ್ದ ಆಯಧಾನಗಳು ಬದಲಾಗಿ ಆಧುನಿಕ, ಯಾಂತ್ರಿಕ ಆಯದಾನಗಳನ್ನು ಬಳಸುವ ಮೂಲಕ ತಮ್ಮ ವೃತ್ತಿಯನ್ನು ಕಾಲದಿಂದ ಕಾಲಕ್ಕೆ ನವೀನ ರೀತಿಯಲ್ಲಿ ಬದಲಾಯಿಸಿಕೊಂಡು ನೈಪುಣ್ಯತೆಯಿಂದ ತಮ್ಮ ವೃತ್ತಿಯಲ್ಲಿ ತೊಡಗಿದ್ದಾರೆ.

**ಕಮ್ಮಾರ**

ಕಬ್ಬಿಣದ ಕೆಲಸ ಮಾಡುವ ಪಾರಂಪರಿಕ ಕಸಬುದಾರರನ್ನು ಕಮ್ಮಾರರೆಂದು ಕರೆಯುತ್ತಾರೆ. ಕುಡುಗೋಲು, ಮಚ್ಚು, ಕೊಡಲಿ, ಗುದ್ದಲಿ, ಹಾರೆ ಕೋಲು, ಪಿಕಾಸಿ, ಮಾವುಟಿ, ಸಲಿಕೆ, ಕತ್ತಿ, ಕಠಾರಿ, ಚೂರಿ, ಗುರಾಣಿ, ಮುಂತಾದ ಸಾಮಾನುಗಳನ್ನು ತಯಾರಿಸುವವನು ರಿಪೇರಿ ಮಾಡಿ ಹರಿತ ಕೊಡುವ ಕೆಲಸ ಕಮ್ಮಾರನದು. ಕಬ್ಬಿಣವನ್ನು ಕುಲುಮೆಯಲ್ಲಿ ಕಾಯಿಸಿ ಹದಮಾಡಿ ಬೇಕಾದ ಆಕಾರಗಳಿಗೆ ತಿರುಗಿಸಿ ವಿವಿಧ ರೀತಿಯ ಸಾಮಾನುಗಳನ್ನು ಮಾಡುವಲ್ಲಿ ಆತ ನಿಪುಣ, ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರಿಗೆ, ಯುದ್ದ ಸಾಮಾಗ್ರಿಗಳನ್ನು ತಯಾರಿಸುವಲ್ಲಿ ಕಮ್ಮಾರನದು ಮುಖ್ಯ ಪಾತ್ರವಾಗಿತ್ತು.

[2] ಮಂಜುನಾಥ ಬಿ.ಆರ್ ಮತ್ತು ಶೈಲಜ ಕೆ (2015). ಚಾಮರಾಜನಗರ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ರೂಪುರೇಷೆಗಳು. ಸಂಶೋಧನಾ ಮಾರ್ಗ, ಸಂಪುಟ–1, ಸಂಚಿಕೆ–3

ಚಾಮರಾಜನಗರದ ಕೆಲವು ಗ್ರಾಮಗಳಲ್ಲಿ ಕಮ್ಮಾರನಿದ್ದೂ ಆತ ಕೃಷಿ ಉಪಕರಣ ಗೃಹೋಪಕರಣಗಳನ್ನು ಸಿದ್ಧಪಡಿಸುತ್ತಾನೆ. ಅಲ್ಲದೆ ಇಂದಿನ ಆಧುನಿಕ ಕಾಲದಲ್ಲಿ ಕಬ್ಬಿಣ ಸಾಮಾನುಗಳ ತಯಾರಿಕೆ ವಿವಿಧ ರೀತಿಯಲ್ಲಿ ಬೆಳದಿದೆ. ಗೇಟ್, ಗ್ರೀಲ್ಸ್, ಕಿಟಕಿ, ಡೋರ್ ಡಿಸೈನ್ ವಿನ್ಯಾಸಗಳು ಹೊಸ ತಲೆಮಾರಿನಲ್ಲಿ ಬದಲಾವಣೆಗೆ ಕಂಡಿದ್ದರೂ ಪ್ರಾಚೀನತೆಯ ಕುಲುಮೆ ಕಸುಬು ಇಂದು ಕಣ್ಮರೆಯಾಗಿವೆ. ಹೊಸ ಹೊಸ ಯಾಂತ್ರಿಕ ಉಪಕರಣಗಳ ಮೂಲಕ ಇಂದು ಕಮ್ಮಾರರು ತನ್ನ ಕಸುಬಿನಲ್ಲಿ ನಿರತರಾಗಿರುವುದನ್ನು ಇಲ್ಲಿ ಗುರ್ತಿಸಬಹುದಾಗಿದೆ. ಅಲ್ಲದೆ ತಮ್ಮ ಮೂಲ ಕಸುಬಿನ ನಡುವೆ ಇತರ ಕಸುಬನ್ನು ಕಮ್ಮಾರರು ಆವಲಂಬಿಸಿ ಜೀವನ ನಡೆಸುತ್ತಿದ್ದಾರೆ.

**ಚಮ್ಮಾರಿಕೆ**

ಸತ್ತ ಪ್ರಾಣಿಗಳ ಚರ್ಮವನ್ನು ಬಿಡಿಸಿ ಅದನ್ನು ಹದಗೊಳಿಸಿ ಅದರಿಂದ ವಿವಿಧ ವಸ್ತುಗಳನ್ನು ತಯಾರಿಸುವುದೇ ಚಮ್ಮಾರಿಕೆ. ಪಾದರಕ್ಷೆ, ನಡುವಿನ ಪಟ್ಟಿ, ವ್ಯಾನಿಟಿ ಬ್ಯಾಗ್, ಕೈ ಚೀಲ, ಮತ್ತು ಗೆಜ್ಜೆ ಸರ, ನೊಗ ಸುತ್ತು, ಬಾರುಕೋಲು, ಮೊದಲಾದ ವಸ್ತುಗಳನ್ನು ಚರ್ಮದಿಂದ ತಯಾರಿಸುತ್ತದೆ. ಇದಲ್ಲದೆ ಜಾನಪದ ಸಂಗೀತದ ಪರಿಕರಗಳಾದ ತಮಟೆ ನಗಾರಿ, ಡೊಳ್ಳು, ದಮ್ಮಡಿ, ತಬಲ, ಮದ್ದಳೆ, ಹಾಗೂ ತೊಗಲು ಗೊಂಬೆಗಳು ಸಹ ಚರ್ಮದಿಂದ ತಯಾರಿಸಲಾಗುತ್ತದೆ, ಇಂತಹ ವಸ್ತುಗಳನ್ನು ತಯಾರಿಸುವ ಕಲಾ ನಿಪುಣರಿಗೆ ಚಮ್ಮಾರ ಎಂದು ಕರೆಯುತ್ತಾರೆ, ಚಮ್ಮಾರ ತಯಾರಿಸಿದ ವಸ್ತುಗಳಿಗೆ ಆಧುನಿಕತೆಯಲ್ಲೂ ತುಂಬಾ ಬೇಡಿಕೆಯಿದೆ ಚಮ್ಮಾರರು ಪಟ್ಟಣಗಳಲ್ಲಿ ಚಿಕ್ಕ ಅಂಗಡಿಯನಿಟ್ಟು ಪಾದರಕ್ಷೆಗಳನ್ನು ಮಾರಾಟ ಮಾಡುತ್ತಾರೆ.

**ಕುಂಬಾರಿಕೆ**

ಮಡಿಕೆ, ಕುಡಿಕೆ, ಗಡಿಗೆ, ನಾಡಹೆಂಚು, ದೀಪ, ಹೂಕುಂಡ, ಗಡಿಗೆ ಕುಂಭ ಮತ್ತಿತರ ಸಾಮಾನುಗಳನ್ನು ತಯಾರಿಸುವ ವೃತ್ತಿ ಪರಂಪರೆಯಿಂದ ಬಂದಿದೆ. ಈ ಕಸುಬು ಮಾಡುವವರು ಕುಂಬಾರರು. ಕುಂಬಾರರಲ್ಲಿ ನಾಲ್ಕು ಒಳಪಂಗಡಗಳಿವೆ. ಶೆಟ್ಟಿಗಾರರು, ಲಿಂಗಕುಂಬಾರರು, ಗೌಡ ಕುಂಬಾರರು ಮತ್ತು ಸಜ್ಜನ ಕುಂಬಾರರು. ಇವರು ಚಾಮರಾಜನಗರದ ಮಲ್ಲೂಪುರ, ರಾಮಸಮುದ್ರ, ಹೆಬ್ಬಸೂರು, ಅರಳೀಪುರ, ಆಲೂರು ಮೊದಲಾದ ಗ್ರಾಮಗಳಲ್ಲಿ ನೆಲಸಿದ್ದು ತಮ್ಮ ಪಾರಂಪರಿಕ ವೃತ್ತಿಯ ನಡುವೆ ಕೃಷಿ, ಪಶುಸಂಗೋಪನೆಯಲ್ಲಿ ತೊಡಗಿದ್ದಾರೆ. ಪ್ರತಿಯೊಂದು ವೃತ್ತಿಯವರು ತಾವು ಬಳಸುವ ಉಪಕರಣಗಳ ಬಗ್ಗೆ ಪೂಜ್ಯ ಹಾಗೂ ಗೌರವ ಭಾವನೆಯನ್ನು ಹೊಂದಿದ್ದಾರೆ. ಅವರೇ ಹೇಳುವಂತೆ 'ಅವು ಅನ್ನ ಕೊಡುವ ದೇವರುಗಳು' ಆಗಾಗಿ ಕುಂಬಾರರು ಕೊಡತಿಗರಿ, ತಿಗರಿ, ತಿರುಗಿಸುವ ರಾಟೆ, ಮಣ್ಣಿನ ಪಾತ್ರೆಗಳಿಗೆ ರೂಪ ಕೊಡುವಾಗ ಬಳಸುವ ಗಂಡಪನನ್ನು ಪೂಜಿಸುತ್ತಾರೆ. ಅರಳು ಇರಲಾರದ ಮೆತ್ತನೆಯ ಮಣ್ಣನ್ನು ತಂದು ನೀರಿಟ್ಟು ನೆನೆಸಿ ಹದಮಾಡಿ ತಿಗರಿಯಲ್ಲಿಟ್ಟು ಬೇಕಾದ ಆಕಾರದಲ್ಲಿ ಪಾತ್ರೆಗಳನ್ನು ತಯಾರಿಸುತ್ತಾರೆ. ನಂತರ ಆವಿಗೆಯಲ್ಲಿಟ್ಟು ಸುಟ್ಟ ಮೇಲೆ ಅದು ನಾಜೂಕಾದ ಪಾತ್ರೆಗಳಾಗುತ್ತದೆ.

ಹಿಂದಿನ ಕಾಲದಲ್ಲಿ ಮನೆ ಬಳಕೆಯ ಎಲ್ಲಾ ವಸ್ತುಗಳನ್ನು ಕುಂಬಾರನಿಂದಲೇ ತಯಾರಾಗುತ್ತಿತ್ತು. ತುಂಬಾ ಬೇಡಿಕೆಯಿತ್ತು ಮಣ್ಣಿನ ಪಾತ್ರೆಯ ಅಡುಗೆ ಹೆಚ್ಚಿನ ರುಚಿ ಎಂಬ ಮಾತು ಕೇಳಿಬರುತ್ತಿತ್ತು. ಆದರೆ ಬದಲಾದ ಆಧುನಿಕತೆ ಮತ್ತು ತಾಂತ್ರಿಕತೆ ಕಾಲದಲ್ಲಿ ಲೋಹದ ಪಾತ್ರೆಗಳು, ವಸ್ತುಗಳು ಹೆಚ್ಚು ಬಳಕೆಯಲ್ಲಿದ್ದು ಪಾರಂಪರಿಕ ಮಣ್ಣಿನ ಪಾತ್ರೆಗಳು, ವಸ್ತುಗಳು ಕಣ್ಮರೆಯಾಗುತ್ತಿವೆ. ಇದರಿಂದ ಕುಂಬಾರರು ಪಾರಂಪರಿಕೆ ವೃತ್ತಿಯನ್ನು ಬಿಟ್ಟು ಹೆಚ್ಚು ಸಂಪಾದನೆ ತರುವ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕುಂಬಾರರ ಮಣ್ಣಿನ ಪಾತ್ರೆಗಳು ಈಗ ಕೇವಲ ಹಬ್ಬದ ದಿನಗಳು, ವಿವಾಹ, ಗೃಹಪ್ರವೇಶ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಇಂದಿಗೂ ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ. ಮೂಲ ವೃತ್ತಿ ಕಸುಬುದಾರರು ಮಂಟೆಸ್ವಾಮಿ, ಸಿದ್ದಪ್ಪಾಜಿ ಒಕ್ಕಲಿನವರಾಗಿದ್ದು ಬೊಪ್ಪೆಗೌಡನಪುರ, ಚಿಕ್ಕಲ್ಲೂರು, ಕಪಡಿ ಇವರ ಧಾರ್ಮಿಕ ಕ್ಷೇತ್ರವಾಗಿದ್ದೂ, ಸಿದ್ಧಪ್ಪಾಜಿಯ ಆರಾಧಕರಾಗಿದ್ದಾರೆ.

**ಅಗಸರು**

ಬಟ್ಟೆಗಳನ್ನು ಶುಚಿ ಮಾಡುವವರೇ ಅಗಸರು. ಇವರಿಗೆ ಮಡಿವಾಳ ಎಂದು ಕರೆಯುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಅನುಕೂಲಸ್ಥರ ಮನೆಗಳಿಗೆ ಹೋಗಿ ಅವರ ಮಾಸಿದ ಸೀರೆ, ಕುಪ್ಪಸ, ಅಂಗಿ, ಟವಲು, ಮತ್ತಿತರ ಬಟ್ಟೆಗಳನ್ನು ಶುಚಿಮಾಡಿ, ಇಸ್ತ್ರಿಮಾಡಿ ಕೊಡುವುದು ಇವರ ಕಸುಬು ಪ್ರತಿಯಾಗಿ ಇವರಿಗೆ 'ಆಯಾ' ದೊರೆಕುತ್ತದೆ. ಇವರು ನಗರ ಪ್ರದೇಶಗಳಲ್ಲಿ ಲ್ಯಾಂಡ್ರಿ ಅಂಗಡಿಗಳನ್ನು ತೆರೆದು ಆಧುನಿಕ ರೀತಿಯಲ್ಲಿ ಕುಲಕಸುಬು ಮುಂದುವರಿಸುತ್ತಿದ್ದಾರೆ.

**ಅಕ್ಕಸಾಲಿಗರು**

ಅಕ್ಕಸಾಲಿಗ ಪದದ ಮುಖರೂಪ ಅರ್ಕಸಾಲಿ ಅರ್ಕ ಎಂದರೆ ಅರಗು, ಮರಗು ಹಾಕು ಎಂಬ ಅರ್ಥವಿದೆ. ಇವರ ಮತ್ತೊಂದು ಹೆಸರು ಚೀನಿದಾರಿಕೆಯವರು ಎಂದೂ ಹೆಸರಿದೆ. ಚಿನ್ನ, ಬೆಳ್ಳಿ, ಆಭರಣಗಳನ್ನು ತಯಾರಿಸುವ ಕುಶಲಕರ್ಮಿಗಳು ಇವರು ಇವರನ್ನು ವಿಶ್ವಕರ್ಮರು, ಪಾಂಚಾಲರು ಎಂದು ಗುರ್ತಿಸುವುದುಂಟು. ಇವರು ಜಗತ್ತನ್ನು ಸೃಷ್ಟಿಸಿದವರೆಂದು, ಪರಬ್ರಹ್ಮನೆಂದು ವೇದಗಳಲ್ಲಿ ಪರಿಣಿತವಾಗಿರುವ 'ವಿಶ್ವಕರ್ಮ' ಅಕ್ಕಸಾಲಿಗ ವಂಶದ ಮೂಲ ಪುರುಷ. ಇವರು ಬೆಳ್ಳಿ ಬಂಗಾರದ ಆಭರಣಗಳನ್ನು ತಯಾರಿಸುವ ಬೆಂಡೋಲೆ, ಅರಳು, ಮೂಗುಬೊಟ್ಟು, ತಾಳಿಸರ, ನೆಕ್ಲೇಸು, ಝುಮುಕಿ, ವಂಕಿ, ಡಾಬು, ಕಾಲುಂಗುರ, ಚೈನು, ಹಾಗೇ ನಾನಾ ರೀತಿಯ ಆಭರಣಗಳನ್ನು ಅಕ್ಕಸಾಲಿಗರು ತಯಾರಿಸುತ್ತಾರೆ. ಅಲ್ಲದೆ ದೇವರ ಸಾಮಾನು ಕಿರೀಟಗಳು, ಮೂರ್ತಿ ಅವರದೇ ಆದ ಶಾಸ್ತ್ರಬದ್ದವಾಗಿ ಮಾಡುತ್ತಾರೆ, ಆದರೆ ಸ್ತ್ರೀ ಪುರುಷರು ಧರಿಸುವ ಆಭರಣಗಳನ್ನು ಆಯಾಕಾಲದ ಅಭಿರುಚಿ ಬೇಡಿಕೆಗಳಿಗೆ ಅನುಸಾರವಾಗಿ ನವನವೀನವಾಗಿ ತಯಾರಿಸುತ್ತಾರೆ. ಚಾಮರಾಜನಗರದ ಅಕ್ಕಸಾಲಿಗರು ಪರಂಪರೆಯಿಂದ ವೃತ್ತಿ ನೈಪುಣ್ಯತೆ ಪಡೆದಿದ್ದೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ, ತಮ್ಮದೆ ಆದ ಜ್ಯೂಯಲರಿ ಷಾಪ್‌ಗಳನ್ನು ತೆರೆದು ನವನವೀನವಾಗಿ ಆಭರಣಗಳನ್ನು ತಯಾರಿಸುತ್ತಾರೆ.

**ನೇಕಾರಿಕೆ**

ಬಿದಿರಿನ ಬೊಂಬನ್ನು ಕೂಯ್ದು ಸಣ್ಣ ಸಣ್ಣ ಪಟ್ಟಿಯನ್ನಾಗಿ ಸೀಳಿ ಗೃಹೋಪಯೋಗಿ ವಸ್ತುಗಳಾದ ಬುಟ್ಟಿ, ಕುಕ್ಕೆ, ಮೊರ, ಪಂಜರ, ಮತ್ತು ಚಿಬ್ಲು, ಅಲಂಕಾರಿಕ ವಸ್ತುಗಳನ್ನು ತಯಾರಿಸುವ ಕಸುಬಿಗೆ ನೇಕಾರಿಕೆ ಎನುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಇವರು ಬಿದಿರು ಉತ್ಪನ್ನಗಳನ್ನು ಅರಣ್ಯದಿಂದ ತಂದು ಸಿದ್ದ ವಸ್ತುಗಳಾಗಿ ಮಾರ್ಪಡಿಸಿ ವಿವಿಧ ವಸ್ತುಗಳನ್ನು ನೇಯ್ದು ಪಟ್ಟಣದಲ್ಲಿ ಮತ್ತು ಹಳ್ಳಿಗಳಿಗೆ ತಂದು ಮಾರಟಮಾಡಿ ಜೀವನ ನಡೆಸುತ್ತಾರೆ.

ನೇಕಾರಿಕೆಯಲ್ಲಿ ಮಹಿಳೆಯರು ತೊಡಗಿದ್ದು ಇವರು ಪ್ಲಾಸ್ಟಿಕ್ ವಯರ್‌ನಿಂದ ಅಲಂಕಾರೀಕರವಾಗಿ ಬುಟ್ಟಿ, ಬ್ಯಾಗುಗಳನ್ನು ನೇಯ್ಯುತ್ತಾರೆ ನೆಯ್ದ ಉತ್ಪನ್ನಗಳನ್ನು ಪಟ್ಟಣದಲ್ಲಿ ಮಾರಟ ಮಾಡುತ್ತಾರೆ. ಕೃಷಿ ಉತ್ಪನ್ನಗಳಾದ ತೆಂಗಿನನಾರಿನಿಂದ ಹಗ್ಗ, ಉರಿಗಳನ್ನು ತಯಾರಿಸುವ ನೇಕಾರರು ಈ ಭಾಗಗದಲ್ಲಿ ಕಂಡು ಬರುತ್ತಾರೆ.

**ಕ್ಷೌರಿಕರು**

ಕುಲಕಸುಬುದಾರರಲ್ಲಿ ಕ್ಷೌರಿಕರೂ ಪ್ರಮುಖರು. ಇವರನ್ನು ಹಜಾಮರು, ಕೆಲ್ಸಿ ಮತ್ತು ಹಡಪದ, ಕ್ಷೌರಿಕರು ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಮಾನವನ ದೇಹದ ತಲೆ ಕೂದಲು , ಮುಖದ ಗಡ್ಡೆ, ಮೀಸೆ ತೆಗೆಯುವ ಕಾಯಕ ಮಾಡುವ ಇವರಿಗೆ ಇಂದಿನ ಆಧುನಿಕತೆಯಲ್ಲಿ 'ಹೇರ್ ಕಟ್ಟರ್' ಎಂದು ಕರೆಯುತ್ತಾರೆ. ಇವರು ಪಾರಂಪರಿಕವಾಗಿ ಮುಂದುವರಿಸಿಕೊಂಡು ಬಂದ ಕಾಯಕ ನಿಷ್ಠರು. ಹಬ್ಬ, ಹುಟ್ಟು, ಸಾವು ಮೊದಲಾದ ಧಾರ್ಮಿಕ ವಿಧಿ ಆಚರಣೆಗಳನ್ನು ಇವರ ಪಾತ್ರ ಮುಖ್ಯ. ಪ್ರಸ್ತುತ ಬದಲಾದ ಸಂದರ್ಭದಲ್ಲಿ ಒಂದೇ ಸಮುದಾಯ ಅನುಸರಿಸಿಕೊಂಡು ಬಂದ ಈ ವೃತ್ತಿಯನ್ನು ವಿವಿಧ ಸಮುದಾಯದವರು ಕಟಿಂಗ್ ಮಾಡುವ ವೃತ್ತಿ ನೈಪುಣ್ಯತೆಯನ್ನು ಕೇಶ ವಿನ್ಯಾಸ, ಕೇಶ ಸೌಂದರ್ಯವನ್ನು ಕಲಿತು, ನಗರ, ಪಟ್ಟಣಗಳಲ್ಲಿ ಒಂದು ಉದ್ಯಮವಾಗಿ ಮುಂದುವರಿಸಿಕೊಂಡು ಇಂದಿನ ಆಧುನಿಕತೆಗೆ ಹೊಸ ರೂಪ ಆಕರ್ಷಣೆ ನೀಡುತ್ತಿದ್ದಾರೆ.

**ಕೃಷಿ ಕಾರ್ಮಿಕರು**

ಜಗತ್ತಿನಾದ್ಯಂತ ಬಹುತೇಕ ಎಲ್ಲಾ ಸಮುದಾಯಗಳಲ್ಲಿ ಕೃಷಿ ಒಂದು ಮುಖ್ಯ ಕಸುಬು ಇದರ ಆವಿಷ್ಕಾರಕ್ಕೆ ಪ್ರಕೃತಿಯೇ ಪ್ರೇರಣೆ. ಗಿಡಮರಗಳು, ಹೂ ಕಾಯಿ ಹಣ್ಣು ಬಿಡುವುದನ್ನು ಬೀಜಗಳ ಮೂಲಕ ಫಲೋತ್ಪತ್ತಿ ಮಾಡುವುದನ್ನು ಕಂಡ ಮಾನವ ಅದೇ ವಿಧಾನವನ್ನು ಅನುಸರಿಸಿ ಭೂಮಿಯಲ್ಲಿ ಬೀಜ ನೆಟ್ಟು ಬೆಳೆಸುವುದನ್ನು ಕಲಿತದ್ದು ಒಂದು ಆಶ್ಚರ್ಯವೇ ಸರಿ. ಭೂಮಿಯನ್ನು ಉತ್ತು, ಭಿತ್ತು ರಾಗಿ, ಜೋಳ, ಕಡಲೆ, ಸಜ್ಜೆ, ಭತ್ತ, ನವಣೆ, ತರಕಾರಿ ಹೀಗೆ ನಾನಾ ರೀತಿಯ ಆಹಾರ ಬೆಳೆಗಳನ್ನು ಬೆಳೆಯುವುದನ್ನು ಕಲಿತುಕೊಂಡ ಕೃಷಿ ಜೀವನಾವಲಂಬಿ ಕಸುಬಾಗಿ ಬೆಳವಣಿಗೆಯಾದ ಮೇಲೆ ಈ ಕ್ಷೇತ್ರದಲ್ಲಿ ಹೆಚ್ಚಿನ ಬೆಳವಣಿಗೆಗಳಾದವು. ಗಂಡು, ಹೆಣ್ಣಿನ ಸಮಾನ ಅವಕಾಶಗಳನ್ನು ಒದಗಿಸಿದ ವ್ಯವಸಾಯ ಒಂದು ಸಾಮೂಹಿಕ ಕಸುಬಾಗಿ ಜನಮನ್ನಣೆ ಗಳಿಸಿದೆ. ಆಹಾರ ಧಾನ್ಯಗಳು ಮಾತ್ರವಲ್ಲದೆ

ಕಬ್ಬು, ಸೂರ್ಯಕಾಂತಿ, ಬಾಳೆ, ತೆಂಗು, ಅಡಿಕೆ, ಮಾವು, ಹತ್ತಿ ಮೊದಲಾದ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳನ್ನು ಇಲ್ಲಿನ ರೈತರು ಬೆಳೆದು ವ್ಯಾಪಾರ ವಹಿವಾಟುಗಳನ್ನು ಮಾಡಿ ಲಾಭದಾಯಕ ಜೀವನ ನಡೆಸುತ್ತಿದ್ದಾರೆ. ಕೃಷಿಯ ಜೊತೆಗೆ ಪಶುಸಂಗೋಪನೆಯು ಇಲ್ಲಿನ ಜನರ ಲಾಭದಾಯಕ ವೃತ್ತಿಯಾಗಿದೆ. ಕೃಷಿ ಹಾಗೂ ಪಶುಪಾಲನೆ ಇಂದು ಒಂದು ಉದ್ಯಮವಾಗಿ ಬೆಳವಣಿಗೆ ಹೊಂದಿದೆ.

ಈ ಎಲ್ಲಾ ಕುಲಕಸುಬುಗಳು ಪರಂಪರೆಯಿಂದ ಬೆಳೆದು ಬಂದಿವೆ. ತಲೆಮಾರಿನಿಂದ ತಲೆಮಾರಿಗೆ ಬೆಳೆದು ಬಂದ ಈ ಕುಲಕಸುಬುಗಳು ಕಾಲದ ಬದಲಾವಣೆಯಿಂದಾಗಿ ಕಸುಬುಗಳಲ್ಲಿ ವ್ಯತ್ಯಾಸಗಳು, ಬದಲಾವಣೆಗಳು ಉಂಟಾಗಿವೆ. ಕೇವಲ ಜೀವನೋಪಾಯಕ್ಕಾಗಿ ಹುಟ್ಟಿಕೊಂಡ ಈ ಕಸುಬುಗಳು ಕ್ರಮೇಣ ಜಾತಿ, ಸಮುದಾಯಗಳಾಗಿ ಮಾರ್ಪಟ್ಟಿದೆ.

ಇಂದು ಈ ಮೂಲ ಕಸುಬುಗಳು ಆಧುನೀಕರಣ, ಯಾಂತ್ರಿಕ ಜೀವನದ ಪ್ರಭಾವದಿಂದ ಮೂಲ ಸಂಸ್ಕೃತಿ, ಸ್ವಾಭಾವಿಕವಾಗಿ ಬಂದ ಪಾರಂಪರಿಕ ವಸ್ತುಗಳು ವಿನಾಶದಂಚಿನಲ್ಲಿದೆ. ಕುಲಕಸುಬುದಾರರು ಅವರ ಮಕ್ಕಳು ವಿದ್ಯಾವಂತರಾಗಿ ಗ್ರಾಮೀಣ ಪ್ರದೇಶದಿಂದ ಪಟ್ಟಣಕ್ಕೆ ಉದ್ಯೋಗಕ್ಕಾಗಿ ವಲಸೆ ಹೋಗುತ್ತಿದ್ದಾರೆ. ಇಂತ ಮೂಲ ಕಸುಬುಗಳಿಗೆ ಇಂದು ಬೇಡಿಕೆ ಕ್ಷೀಣಿಸುತ್ತಿದೆ. ಪ್ರೋತ್ಸಾಹ ಸಿಗುತ್ತಿಲ್ಲ ಆದ ಕಾರಣ ಬೇರೆ ಬೇರೆ ಶ್ರಮದಾಯಕವಲ್ಲದ ಹೆಚ್ಚು ಹಣ ತರುವ ಕೆಲಸಗಳನ್ನು ಆಶ್ರಯಿಸುತ್ತಿದ್ದಾರೆ. ಯಾಂತ್ರೀಕರಣ, ಆಧುನೀಕರಣ ಪ್ರಭಾವದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅವರ ಸಂಸ್ಕೃತಿ ವಿನಾಶ ಹೊಂದಿದೆ. ಇಂದು ಅವುಗಳನ್ನು ಉಳಿಸಲು ಹಲವಾರು ಸಂಗ್ರಹ ಕಾರ್ಯಗಳು ನಡೆಯುತ್ತಿದೆ. ಇದೇ ಪರಿಸ್ಥಿತಿ ಭಾರತದಲ್ಲೂ ಬರುವ ನಾವು ಎಚ್ಚೆತ್ತು ಕೊಳ್ಳಬೇಕಿದೆ.

**ಉಪಸಂಹಾರ**

ಯಾಂತ್ರಿಕ ಬದುಕು ಎಲ್ಲರನ್ನು ಆಕರ್ಷಿಸಿ ಹತ್ತು ಜನ ಮಾಡುವ ಕೆಲಸವನ್ನು ಒಂದು ಯಂತ್ರ ಒಂದು ಗಂಟೆಯಲ್ಲಿ ಮಡುವುದರಿಂದ ಎಲ್ಲರು ಯಾಂತ್ರಿಕ ಬದುಕಿಗೆ ಶರಣಾಗಿದ್ದಾರೆ. ಕುಲಕಸುಬುಗಾರರು ತಯಾರಿಸಲ್ಪಟ್ಟ ವಸ್ತುಗಳಿಗೆ ಬೇಡಿಕೆ ಕಡಿಮೆಯಗಿದೆ. ಗ್ರಾಮಗಳಲ್ಲಿ ಜನ್ಮತಳೆದು ಆರೋಗ್ಯ ಪೂರ್ಣ ಸುಖ ಜೀವನ, ಸ್ವತಂತ್ರ ಶೀಲತೆ ಹಾಗೂ ಸ್ವಾಭಿಮಾನವನ್ನು ತುಂಬುತ್ತಿದ್ದ ಮೂಲ ಸಂಸ್ಕೃತಿಗಳು ಮರೆಯಾಗಿ ತಮ್ಮ ಜೀವನದ ಎಲ್ಲಾ ಆಗತ್ಯಗಳಿಗೂ ಪಾಶ್ಚಾತ್ಯ ಬದುಕಿನ ಕಡೆಗೆ ನೋಡುವ ತಮ್ಮ ಬೇರುಗಳನ್ನೇ ತಾವೇ ಕತ್ತರಿಸಿಕೊಳ್ಳುವ ಪರವಲಂಬನೆ ಪ್ರವೃತ್ತಿ ನಮ್ಮಲ್ಲಿ ದಟ್ಟವಾಗಿ ಬೆಳಯುತ್ತಾ ನಮ್ಮತನವನ್ನೇ ತಿಂದು ಹಾಕುತ್ತಿದೆ.

ಮಹಾತ್ಮಗಾಂಧಿಯವರು "ಗ್ರಾಮೀಣ ಪ್ರದೇಶದಲ್ಲಿ ಶಕ್ತಿಶಾಲಿಯಾಗಿದ್ದ ಸ್ವಾವಲಂಭಿ ಬದುಕನ್ನು ಸ್ಥಾಪಿಸಲು ಮತ್ತು ಪ್ರಾಚೀನ ಗ್ರಾಮೀಣ ಸಂಸ್ಕೃತಿಯನ್ನು ಪರಿಸ್ಕರಿಸಿ ಕಾಲಕ್ಕೆ ತಕ್ಕಂತೆ ಬಳಸಿಕೊಂಡಲ್ಲಿ ನಮ್ಮ ಆಧುನಿಕವಾದ ಎಲ್ಲಾ ಸಮಸ್ಯೆಗಳಿಗೆ ಮದ್ದು" ಎಂದು ಪ್ರತಿಪಾದಿಸಿದ್ದರು ಆದರೆ ಯಾಂತ್ರಿಕ ಬದುಕಿನಿಂದ ನಶಿಸಿ ಹೋಗುತ್ತಿರುವ ಗ್ರಾಮ ಸಂಸ್ಕೃತಿಗಳ ಕಡೆಗೆ ಮತ್ತು ಅವುಗಳ ಅಂತರಾಳದ ಅವಿನಾಶಿ ಮೌಲ್ಯದ ಕಡೆಗೆ ಯುವ ಪೀಳಿಗೆಯ ಮನಸ್ಸನ್ನು ಹಿಂದುರಿಗಿಸಿ ಪ್ರೋತ್ಸಾಹಿಸಬೇಕಿದೆ. ಯುವ ಪೀಳಿಗೆ ಎಚ್ಚೆತ್ತು ತಮ್ಮ ಮೂಲ ಸಂಸ್ಕೃತಿಯ ಉಳಿವಿನ ಕಡೆಗೆ ಹಿಂದುರಗಬೇಕಿದೆ. ಸರ್ಕಾರ ಕುಲಕಸುಬಗಳು ಅಭಿವೃದ್ದಿಗೆ ಹೆಚ್ಚಿನ

ಆರ್ಥಿಕ ನೆರವು ನೀಡಿ ವಿನಾಶದಂಚಿನಲ್ಲಿರುವ ಮೂಲ ಬದುಕಗಳ ಉಳಿಸಬೇಕಿದೆ. ಆಗ ಮಾತ್ರ ಭಾರತೀಯ ಸಂಸ್ಕೃತಿ ಆರೋಗ್ಯ ಪೂರ್ಣವಾಗಿ ಅಭಿವೃದ್ಧಿ ಕಾಣಲು ಸಾದ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- Epstein. Scarlet. T. (1962). Economic development and social change in south India. Manchester University press, Manchester.
- Gurya. G. S. (1961). Caste class and occupation. Popular book depot, Bombay.
- ಅಶೋಕ್‌ಕುಮಾರ್. ಯು. ಬಿ. (2001). ಕೃಷಿ ಕೂಲಿಕಾರರ ಬದುಕು: ಬವಣೆ. ಚೇತನ ಬುಕ್ ಹೌಸ್, ಮೈಸೂರು.
- ಚಾಮರಾಜನಗರ ಜಿಲ್ಲಾ ಗೆಜಟೀಯರ್. ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.
- ಚಾಮರಾಜನಗರ ಜಿಲ್ಲಾ ಅಂಕಿ ಅಂಶಗಳ ನೋಟ. ಜಿಲ್ಲಾ ಮತ್ತು ಸಾಂಖ್ಯೀಕ ನಿರ್ದೇಶನಾಲಯ, ಚಾಮರಾಜನಗರ
- ಜನಗಣತಿ ವರದಿ (2011). ಭಾರತ ಸರ್ಕಾರ. ನವದೆಹಲಿ
- ಕರ್ನಾಟಕ ಕೈಪಿಡಿ–2011. ಕರ್ನಾಟಕ ಗ್ಯಾಸೆಟಿಯರ್ ಇಲಾಖೆ. ಬೆಂಗಳೂರು.
- ಮಲೆಯೂರು ಗುರುಸ್ವಾಮಿ (ಸಂ). ಹೊನ್ನುಹೊಳೆ, ಚಾಮರಾಜನಗರ ಜಿಲ್ಲಾ ಸಾಹಿತ್ಯ ಪರಿಷತ್ತು, ಚಾಮರಾಜನಗರ
- ಮಾವನ ಅಭಿವೃದ್ಧಿ ವರದಿ (2005). ಕರ್ನಾಟಕ ಸರ್ಕಾರ, ಬೆಂಗಳೂರು
- ಮಂಜುನಾಥ ಬಿ.ಆರ್ ಮತ್ತು ಶೈಲಜ ಕೆ (2015). ಚಾಮರಾಜನಗರ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ರೂಪುರೇಷೆಗಳು. ಸಂಶೋಧನಾ ಮಾರ್ಗ, ಸಂಪುಟ–1, ಸಂಚಿಕೆ–3, ಪ್ರಜಾವಿಕಾಸ ಸೇವಾಸಂಸ್ಥೆ, ಮೈಸೂರು.
- ಮೇತ್ರಿ ಕೆ. ಎಂ. (2002). ಬುಡಕಟ್ಟು ಕುಲ ಕಸಬುಗಳು. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಪಳನಿಸ್ವಾಮಿ. (2011). ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ. ಸ್ಕಂದಶ್ರೀ ಪ್ರಕಾಶನ. ಗುಂಡ್ಲುಪೇಟೆ.
- ರೇಷ್ಮೆನಾಡು ವಾರ್ಷಿಕ ಸಂಚಿಕೆ, ರೇಷ್ಮೆನಾಡು ದಿನ ಪತ್ರಿಕೆ, ಚಾಮರಾಜನಗರ.